**ಓ.ಎಸ್. ನಂಬರ್ : 22/2020**
**ಡಿ .ಡಬ್ಲ್ಯೂ : 1**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕ :21.03.2024

**ಮುಂದುವರೆದ ಪಾಟೀ ಸವಾಲು : ವಾದಿಯ ಪರವಾಗಿ ಶ್ರೀ ಹೆಚ್.ಎಸ್.ಪಿ ವಕೀಲರಿಂದ ಃ**

ದಿಃ 08.01.2019 ರಂದು ನಾನು ಸುಬ್ಬಪ್ಪ ಮತ್ತು ಪರಮೇಶ್ ರವರು ನೋಂದಾಯಿತ ವಿಭಾಗ ಪತ್ರವನ್ನು ಮಾಡಿಕೊಂಡಿದ್ದೇವೆ ಅಂದರೆ ಸರಿ. ಸದರಿ ನೋಂದಾಯಿತ ವಿಭಾಗ ಪತ್ರದ ಈ ದೃಢೀಕೃತ ನಕಲನ್ನು ಸಾಕ್ಷಿ ಒಪ್ಪಿಕೊಂಡಿದ್ದು ಅದನ್ನು ನಿಪಿ-22 ಎಂದು ಗುರುತಿಸಲಾಯಿತು. ವಾದಿ ದಾವಾ ಆಸ್ತಿಯಲ್ಲಿ ಭಾಗ ಕೇಳಿದ ನಂತರ ಅವರಿಗೆ ಮೋಸ ಮಾಡಲು ನಿಪಿ-22 ರ ವಿಭಾಗ ಪತ್ರವನ್ನು ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ನಿಪಿ 22 ರಲ್ಲಿ ನನ್ನ ತಂದೆಯ ಪಾಲಿಗೆ ರೂ. 40,000/- ಹಣ ನೀಡಿರುವ ಬಗ್ಗೆ ನಮೂದಿಸಿರುತ್ತೇವೆ ಅಂದರೆ ಸರಿ. ಸದರಿ ಹಣವನ್ನು ನಗದಾಗಿ ಕೊಟ್ಟಿದ್ದು ಅದರ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ನನ್ನ ತಂದೆಗೆ ಸದರಿ ವಿಭಾಗ ಪತ್ರದಂತೆ ಹಣ ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದ ಆಸ್ತಿ ಸರ್ವೆ ನಂಬರ್ 04/3 ಆಸ್ತಿಯು ಈ ದಾವೆಯ ಐಟಂ ನಂಬರ್ 19 ರ ಆಸ್ತಿ ಇರುತ್ತದೆ ಅಂದರೆ ಸರಿ. ಸದರಿ ವಿಭಾಗ ಪತ್ರದ ಸರ್ವೆ ನಂಬರ್ 62 ಈ ದಾವೆಯ ಐಟಂ ನಂಬರ್ 17 ರ ಆಸ್ತಿಯು ಅಂದರೆ ಸರಿ. ಲೋಕೇಶ್ ರವರ ಭಾಗಕ್ಕೆ ಬಂದ ಸರ್ವೆ ನಂಬರ್ 04/15 ರ ಈ ದಾವೆಯ ಐಟಂ ನಂಬರ್ 21 ನೇ ಆಸ್ತಿ ಅಂದರೆ ಸರಿ. ವಿಭಾಗ ಪತ್ರದ ಸರ್ವೆ ನಂಬರ್ 61 ಈ ದಾವೆಯ ಐಟಂ ನಂಬರ್ 16 ರ ಆಸ್ತಿ ಅಂದರೆ ಸರಿ. ನಿಪಿ-22 ರ ವಿಭಾಗ ಪತ್ರದ ಆಸ್ತಿಯಲ್ಲಿ ಕೂಡ ವಾದಿ ಮತ್ತು ಪ್ರತಿವಾದಿ ನಂಬರ್ 3 ಮತ್ತು 5 ರವರಿಗೂ ಸಮಾನ ಭಾಗಾಂಶದ ಹಕ್ಕು ಇದೆ ಅಂದರೆ ನನಗೆ ಗೊತ್ತಿಲ್ಲ. ನಾನು ವಾದಿ ಮತ್ತು ಪ್ರತಿವಾದಿ ನಂಬರ್ 3 ಮತ್ತು 5 ರವರಿಗೆ

ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಅವರಿಗೂ ದಾವಾ ಆಸ್ತಿಗಳಲ್ಲಿ ಈಗ 1/5 ರ ಭಾಗಾಂಶದ ಹಕ್ಕು ಇದೆ ಅಂದರೆ ನನಗೆ ಗೊತ್ತಿಲ್ಲ.

**ಮರುವಿಚಾರಣೆ: ಇರುವುದಿಲ್ಲ**

ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸರಿ ಇದೆ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸೋಮವಾರಪೇಟೆ.